# VTU will tie up with Canadian varsities

TIMES NEWS NETWORK

**Davanagere:** Many Canadian universities are keen on joining hands with Visvesvaraya Technological University (VTU), Belgaum, to introduce postgraduate programmes at the upcoming campus at Muddenahalli near Chikballapur, vice-chancellor Prof H Maheshappa has said.

Recently, a delegation comprising members of VTU, National Design and Research Forum, Institution of Engineers (India) led by the VC visited several universities in Canada to initiate joint research activities and academic collaborations in various streams of engineering and science.

"We have signed MoUs with Aerospace Laboratories of Ryerson University, Toronto, and Concordia University, Montreal, to pursue collaborative projects in small satellite development and aerospace engineering, renewable energy, green nanotechnology and clean water technology," the VC said.

Another important outcome of the visit was the internship opportunity for VTU students at world class laboratories of Canadian universities, he added.

"We also visited the Centre for Advance Nanotechnology, University of Toronto, National Institute of Nanotechnology, University of Alberta, Edmonton Canada-India centre of Excellence at Carleton University, University British Columbia, Simon Fraser University, River Side University, British Columbia University Institute of Technology, and Victoria University and reached agreement on students and faculty exchange programmes and collaborative research and for establishing centre of excellence in a chosen field at VTU," he added.

ಪ್ರದೇಶ ಸಮಾಚಾರ

ಗುರುವಾರ 7 ನವೆಂಬರ್ 2013



# ಕೆನಡಾ ವಿಶ್ವವಿದ್ಯಾಲಯಗಳೊಂದಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಸಹಭಾಗಿತ್ವ

■ ರಮೇಶ ಜಹಗೀರದಾರ್



ದಾವಣಗೆರೆ: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕೆನಡ ದೇಶದ 10 ವಿವಿಗಳೊಂದಿಗೆ ಜಂಟಿ ಒಪ್ಪಂದಕ್ಕೆ ಸಹಿ ಹಾಕಿದ್ದು ವಿವಿಧ ವಿಷಯಗಳಲ್ಲಿ ಪರಸ್ಪರ ಕೈಜೋಡಿಸಿ ಮುನ್ನಡೆಯುವ ತೀರ್ಮಾನಕ್ಕೆ ಬರಲಾಗಿದೆ.

ವಿಟಿಯು ಕುಲಪತಿ ಪ್ರೊ.ಎಚ್. ಮಹೇಶಪ್ಪ ನೇತೃತ್ವದಲ್ಲಿ ವಿವಿಯ ಪ್ರತಿನಿಧಿಗಳು, ನ್ಯಾಷನಲ್ ಡಿಸೈನ್ ಆ್ಯಂಡ್ ರಿಸರ್ಚ್ ಫೋರಂ (ಎನ್‌ಡಿಆರ್‌ಎಫ್), ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಸಂಶೋಧಕರನ್ನು ಒಳಗೊಂಡ ಉನ್ನತಮಟ್ಟದ ನಿಯೋಗ ಇತ್ತೀಚೆಗೆ ಕೆನಡ ದೇಶದ ಶ್ರೇಷ್ಠ ದರ್ಜೆಯ ವಿವಿಗಳಿಗೆ ಭೇಟಿ ನೀಡಿತ್ತು. ಸಂಶೋಧನೆ, ತರಬೇತಿ ಮತ್ತು ಶೈಕ್ಷಣಿಕ ವಿಷಯಗಳಲ್ಲಿ ಸಹಭಾಗಿತ್ವ ಹೊಂದುವುದು ಸೇರಿದಂತೆ ಮಹತ್ವದ ವಿಷಯಗಳ ಬಗ್ಗೆ ಚರ್ಚಿಸಿ ಆ ನಿಟ್ಟಿನಲ್ಲಿ ಮುಂದಡಿ ಇಡಲಾಗಿದೆ.

ನಿಯೋಗದಲ್ಲಿ ವಿಟಿಯುನ ಮುಖ್ಯ ಮೆಂಟರ್ (ಚೀಫ್ ಮೆಂಟರ್) ಡಾ.ಯು. ಚಂದ್ರಶೇಖರ್, ಡೀನ್ ಡಾ.ಡಿ.ಎಚ್. ರಾವ್, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ವಿಶೇಷಾಧಿಕಾರಿ ಡಾ.ಎಸ್. ಮಂಜಪ್ಪ, ಸ್ನಾತಕೋತ್ತರ ವಿಭಾಗದ ಸಂಯೋಜಕ ಡಾ.ದಿನೇಶ್ ರಂಗಪ್ಪ ಹಾಗೂ ಎನ್‌ಡಿಆರ್‌ಎಫ್ ನಿರ್ದೇಶಕ ಡಾ.ಮುರಳಿಕೃಷ್ಣ ರೆಡ್ಡಿ ಇದ್ದರು.

ಟೊರೆಂಟೊದ ವಿಶ್ವ ಪ್ರಸಿದ್ಧ ರೈಯರ್ಸನ್ ವಿವಿ ಹಾಗೂ ಮಾಂಟ್ರಿಯಲ್‌ನ ಕಂಕಾರ್ಡಿಯಾ ವಿವಿಗಳ ಜತೆಗೆ ಚಿಕ್ಕ ಉಪಗ್ರಹಗಳ ಅಭಿವೃದ್ಧಿ, ಬಾಹ್ಯಾಕಾಶ ಇಂಜಿನಿಯರಿಂಗ್, ನವೀಕರಿಸಬಹುದಾದ ಇಂಧನ, ಹಸಿರು ನ್ಯಾನೋ ತಂತ್ರಜ್ಞಾನ ಮತ್ತು ಶುದ್ಧ ನೀರಿನ ತಂತ್ರಜ್ಞಾನ ವಿಷಯಗಳಲ್ಲಿ ಪ್ರಾಜೆಕ್ಟ್ ತಯಾರಿಸಲು ಸಹಭಾಗಿತ್ವ ಒಪ್ಪಂದಕ್ಕೆ ಬರಲಾಗಿದೆ.

ನಿಯೋಗವು ಟೊರೆಂಟೊ ವಿವಿಯ ಅತ್ಯಾಧುನಿಕ ನ್ಯಾನೊ ಟೆಕ್ನಾಲಜಿ ಕೇಂದ್ರ, ಎಡ್‌ಮಾಂಟನ್‌ನ ಅಲ್ಬರ್ಟಾ ವಿವಿಯ ರಾಷ್ಟ್ರೀಯ ನ್ಯಾನೊಟೆಕ್ನಾಲಜಿ ಸಂಸ್ಥೆ ಅಲ್ಲದೇ ಕಾರ್ಲ್‌ಟನ್ ವಿವಿ, ಯುನಿವರ್ಸಿಟಿ ಬ್ರಿಟಿಷ್ ಕೊಲಂಬಿಯಾ, ಸೈಮನ್ ಫ್ರೇಸರ್ ವಿವಿ, ರಿವರ್‌ಸೈಡ್ ವಿವಿ, ಬ್ರಿಟಿಷ್ ಕೊಲಂಬಿಯಾ ಯುನಿವರ್ಸಿಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ವಿಕ್ಟೋರಿಯಾ ವಿವಿಗಳಿಗೂ ಭೇಟಿ ನೀಡಿತ್ತು.

ಈ ವಿವಿಗಳ ಜತೆಗೆ ವಿದ್ಯಾರ್ಥಿ ಮತ್ತು ಸಿಬ್ಬಂದಿ ವಿನಿಮಯ ಕಾರ್ಯಕ್ರಮ, ಸಂಶೋಧನೆ ಸಹಭಾಗಿತ್ವ ಇನ್ನಿತರ ವಿಷಯಗಳ ಬಗ್ಗೆ ಕೈಜೋಡಿಸಲಾಯಿತು. ನಿಯೋಗವು ಅಲ್ಲಿನ ಉನ್ನತ ಶಿಕ್ಷಣ, ವಾಣಿಜ್ಯ ಇಲಾಖೆ ಅಧಿಕಾರಿಗಳೊಂದಿಗೂ ಮಾತುಕತೆ ನಡೆಸಿತು.

ಚಿಕ್ಕಬಳ್ಳಾಪುರ ಬಳಿಯ ಮುದ್ದೇನಹಳ್ಳಿಯಲ್ಲಿರುವ ವಿಟಿಯು ಆವರಣದಲ್ಲಿ ಹೊಸ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಿರುವ ವಿಟಿಯು ಜತೆ ಕೈಜೋಡಿಸಲು ಕೆನಡದ ಅನೇಕ ವಿವಿಗಳು ಆಸಕ್ತಿ ತೋರಿಸಿವೆ. ಈ ನಿಟ್ಟಿನಲ್ಲಿ ನ್ಯಾನೋಟೆಕ್ನಾಲಜಿ, ಸ್ವಚ್ಛ ನೀರು ಹಾಗೂ ಹಸಿರು ಶಕ್ತಿ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿಶೇಷ ಕೇಂದ್ರಗಳನ್ನು ಆರಂಭಿಸುವುದಕ್ಕೂ ಉಭಯ ದೇಶದ ವಿವಿಗಳು ಒಮ್ಮತಕ್ಕೆ ಬಂದಿವೆ.